(e) Action is being taken to issue the Notification under Section 4 of the Land Acquisition Act.

Sri N. O. SAMAJI (Marathi).—

ಶ್ರೀ ಎಂ. ವಿ. ಕೃಷ್ಣಪ್ಪ.—ಗ್ರಾಮಸ್ಥರೇನೋ 14,742 ಚಿಲ್ಲರೆ ರೂಪಾಯಿಗಳನ್ನು ತುಂಬಿ ಕೊಟ್ಟಿದ್ದಾರೆ. ಆದರೆ ಆ ಜಮೀನಿನ ಬಗ್ಗೆ ಇಷ್ಟು ಹೆಚ್ಚಿನ ತಂಟೆ ತಕರಾರುಗಳು ಬರುತ್ತವೆಂದು ಸರ್ಕಾರಕ್ಕೆ ಗೊತ್ತಿರಲಿಲ್ಲ. ಜನರು ಮೇಲೆಂದ ಮೇಲೆ ಅಪೀಲ್ ಹೋದುದರಿಂದ ನಿಧಾನವಾಗಿದೆ. ಈಗ ಲ್ಯಾಂಡ್ ಅಕ್ವಿಜಿಷನ್ ಸೆಕ್ಷನ್ (4)ರ ಪ್ರಕಾರ ಆ ಜಮೀನನ್ನು ಅಕ್ವಯಿರ್ ಮಾಡಿಕೊಳ್ಳ ಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ.

Sri N. O. SAMAJI (Marathi).—

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ 24 ಎಕರೆ, 29 ಗುಂಟೆ ಜಮೀನನ್ನು ಅಕ್ವಯಿರ್ ಮಾಡ ಬೇಕಾಗಿತ್ತು. ಜನಗಳು ಮೇಲೆಂದ ಮೇಲೆ ಅಪೀಲ್ ಹೋದ ಕಾರಣ ಸ್ವಲ್ಪ ನಿಧಾನವಾಗಿದೆ. ಈಗ ಕೂಡಲೆ ಆ ಜಮೀನನ್ನು ಅಕ್ವಯಿರ್ ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ.

Sri A. H. BAPU RAO.– If so, when the actual handing over of the land will take place. Sir ?

Sri M. V. KRISHNAPPA.—Land has to be acquired under section 4 of the Land Acquistion Act. It will be acquired and handed over to the Gram Tana Committee.

Sri B. P. KADAM.—What is the total number of villagers affected, Sir ?

Sri M. V. KRISHNAPPA.—It is a big area, nearly 25 acres of land will have to be acquired.near a village and it is a very valuable land. S.No. 1, 2, 3, 4, 76, 78, 79. There are number of people concerned with that land and therefore there was delay in this matter.

Sri N. O. SAMAJI (Marathi).—

ಶ್ರೀ ಎಂ. ವಿ. ಕೃಷ್ಣಪ್ಪ.—ಅಧಿಕಾರಿಗಳೇನಾದರೂ ಅಲಕ್ಷ್ಯಮಾಡಿ ನಿಧಾನ ಮಾಡಿದ್ದರೆ ಅವರ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುತ್ತಿದ್ದರು. ಆದರೆ ಹಾಗಾಗಲಿಲ್ಲ, ಈ ವಿಚಾರದಲ್ಲಿ ಅನೇಕ ರೈತರಿಗೆ ತೊಂದರೆ ಆಗುವ ಹಾಗಿದ್ದುದರಿಂದ ಅವರು ಒಬ್ಬರಾದಮೇಲೊಬ್ಬರು ಅಪೀಲ್ ಹೋದುದರಿಂದ ಈ ಕೆಲಸ ನಿಧಾನವಾಯಿತು. ಈಗ ಕೇಸ್ ತೀರ್ಮಾನವಾಗಿದೆ. ಆ ಜಮೀನನ್ನು ಅಕ್ವಯಿರ್ ಮಾಡಲು ಜಾಗ್ರತೆ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

Sri N. O. SAMAJI (Marathi)

Sri M. V. KRISHNAPPA.—When we can acquire, we cannot say. It has to be acquired under the Land Acquisition Act. Notification will be issued under section 4. It will take its own time.

ಶ್ರೀ ವಿ. ಎಂ. ದೇವ್.—ಅಕ್ವಿಜಿಷನ್ ಛಾರ್ಜ್ ಮೊದಲೆಷ್ಟಾಗಿತ್ತು, ಈಗೆಷ್ಟಾಗಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ರೇಟ್ ಯಾವರೀತಿ ಇದೆಯೋ ಅದರ ಪ್ರಕಾರ ಕೋಗುತ್ತದೆ. ಇಲ್ಲಿ ಅಕ್ವಯಿರ್ ಮಾಡಿಕೊಳ್ಳತಕ್ಕ ಜಮೀನು ಜಾಸ್ತಿಯಾಗಿತ್ತು. ಆದುದರಿದ ಅದು ಸ್ವೇ ಆಗಿತ್ತು. ಕೆಲವರೊಪ್ಪಿದ್ದರು, ಕೆಲವರೊಪ್ಪಿರಲಿಲ್ಲ. ಹೀಗಾಗಿ ನಿಧಾನವಾಯಿತು.

Sanction of Gavathna Site to the Harijans of Bilgi.

*Q.—716. Sri J. L. KABADI (Baradol).—

Will the Government be pleased to state: —

(a) whether it is a fact that a Gavathana site has been sanctioned to the Harijans at Bilgi;

(SRI J. L. KABADI)

(*b*) whether it is a fact that the Panchayat of Bilgi has filed an appeal to the Revenue Appellate Tribunal against the order of sanction of the site to the Harijans of Bilgi;

(*c*) whether it is a fact that the sanctioned site to Harijans of Bilgi has not yet been given ?

A.—Sri M. V. KRISHNAPPA (Minister for Revenue).—

(*a*) Yes.
(*b*) Yes.
(*c*) Yes.

ಶ್ರೀ ಜೆ. ಎಲ್. ಕಬಾಡಿ.—ಹರಿಜನರಿಗೆ ಈ ನಿವೇಶನದ ಜಾಗವನ್ನು ಕೊಡಬಾರದೆಂದು ಪಂಚಾಯತಿಯವರು ಕೋರ್ಟಿಗೆ ಹೋದ ಬಗ್ಗೆ ಅವರ ಮೇಲೇನು ಸರ್ಕಾರ ಕ್ರಮ ಕೈಗೊಂಡಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೆ ಆ ಜಾಗ ಮಾರ್ಕೆಟ್ ಕಟ್ಟಲು ಬೇಕಾಗಿತ್ತು ಎಂಬ ಉದ್ದೇಶ ಇತ್ತೆಂದು ಹೇಳುತ್ತಿದ್ದರು. ಅದರಮೇಲೆ ಅವರು ಅಪೀಲ್ ಹೋಗಿದ್ದರು. ಈಗ ಅದು ವಜಾ ಆಗಿದೆ. ಈಗ ಮೂರು ಜನರು ಮಾತ್ರ ಹಣ ಕೊಟ್ಟಿದ್ದಾರೆ; ಬಾಕಿಯವರು ಕೊಟ್ಟಿಲ್ಲ.

1-00 P.M.

ಶ್ರೀ ಜೆ. ಎಲ್. ಕಬಾಡಿ.—ಹರಿಜನರಿಗೆ ಈ ನಿವೇಶನವನ್ನು ಕೊಡಬಾರದು ಎನ್ನುವ ಉದ್ದೇಶದಿಂದ ಇದಕ್ಕೆ ಹಣ ಖರ್ಚು ಮಾಡಿದ್ದಾರೆ. ಹಾಗಿದ್ದರೂ ಇವರ ಮೇಲೆ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ ಎನ್ನುವುದು ಸರಿಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಂಚಾಯತಿಯವರು ಇಲ್ಲಿ ಮಾರ್ಕೆಟ್ಟನ್ನು ಮಾಡಬೇಕು ಅದಕ್ಕಾಗಿ ಈ ಜಾಗ ಬೇಕೆಂದು ಅವರೇ ನಾಲ್ಕೈದು ಕೋರ್ಟುಗಳಿಗೆ ಹೋಗಿ ಬಂದಿದ್ದಾರೆ.

ಶ್ರೀ ಜೆ. ಎಲ್ ಕಬಾಡಿ.—ಆ ಪ್ರಶ್ನೆಯಲ್ಲಿ ಕೇಳಿರುವಂತೆ ಹರಿಜನರಿಗೆ ಜಮೀನುಗಳನ್ನು ಕೊಡಬಾರದು ಎನ್ನುವ ಉದ್ದೇಶದಿಂದ ಪಂಚಾಯತಿಯವರು ಕೋರ್ಟಿಗೆ ಹೋಗಿದ್ದಾರೆನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ—ನಾನು ಹೇಳುವುದಕ್ಕಾಗುವುದಿಲ್ಲ. ಈ ಪಂಚಾಯತಿಯವರೇ ಎರಡು, ಮೂರು, ನಾಲ್ಕು ಕೋರ್ಟುಗಳಲ್ಲಿಯೂ ಈ ಜಾಗ ಮಾರ್ಕೆಟ್ಟಿಗಾಗಿ ಇದೆ ಎಂದು ದಾಖಲ್ಮಾಡಿದ ಕೇಸುಗಳು ವಜಾ ಆಗಿ ಅದರ ಮೇಲೆ ಸರ್ಕಾರಕ್ಕೆ ಅಪೀಲು ಬಂದಾಗ ಅದು ಕೂಡ ರಿಜೆಕ್ಟು ಆಯಿತು. ಅದರಿಂದ ಈಗ ಸರ್ಕಾರಕ್ಕೆ ಈ ಜಮೀನನ್ನು ನಾಲ್ಕು ಹರಿಜನರಿಗೆ ಕೊಡಬೇಕೆಂಬ ಉದ್ದೇಶವಿದೆ. ನಾಲ್ಕು ಹರಿಜನರಲ್ಲಿ ಮೂರು ಜನರು ಹಣ ಕಟ್ಟಿದ್ದಾರೆ, ಇನ್ನೊಬ್ಬರು ಇನ್ನೂ ಕೊಟ್ಟಿಲ್ಲ.

ಶ್ರೀ ಆರ್. ಎಂ. ದೇಸಾಯಿ.—ಪಂಚಾಯತಿಯವರಿಗೆ ವಿರೋಧವಾಗಿ ಅಪೀಲು ವಜಾ ಆದಮೇಲೆ ಅದರಂತೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಹಾಗಿರುವಾಗ ಪುನಃ ಇವರು ಅಪೀಲನ್ನು ಹಾಡಲು ಸರ್ಕಾರದ ಅಪ್ಪಣೆಯನ್ನು ಕೇಳಿರುವುದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೆವಿನ್ಯೂ ಕೋರ್ಟಿಗಿಂತ ಸಿವಿಲ್ ಕೋರ್ಟಿಗೆ ಹೋಗುವುದು ಒಳ್ಳೆಯದು ಎಂದು ಅಡ್ವೋಕೇಟು ಜನರಲ್‌ರವರನ್ನು ಕೇಳಿದ್ದೇವೆ ಎಂದು ತಿಳಿಸಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—ಪಂಚಾಯತಿಯವರಿಗೆ ವಿರೋಧವಾಗಿ ಕೇಸು ತೀರ್ಮಾನ ಆಗಿರುವಾಗ ಸರ್ಕಾರದವರು ಇನ್ನೂ ಹರಿಜನರಿಗೇಕೆ ಕಬ್ಜವನ್ನು ಕೊಡಲಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರ ಕಬ್ಜ ಕೊಡುವುದರಲ್ಲದೆ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಪಂಚಾಯತಿಯವರು ಹರಿಜನರಿಗಾಗಿ ಭೂಮಿಯನ್ನು ಹಂಚುವಾಗ ಊರಿನ ಮುಂದಿರುವ ಸ್ಮೆಟುಗಳನ್ನು ಕೊಡಬಾರದು ಎಂದೇನಾದರೂ ನಿಯಮ ವಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಆ ಊರಿನವರಿಗೇ ಸೇರಿದ್ದು. ಅಲ್ಲಿರುವ ಹರಿಜನರು ಮತ್ತು ಆ ಊರಿನ ಮುಖಂಡರೂ ಇಬ್ಬರೂ ಸೇರಿಕೊಂಡು ಒಂದು ರೀತಿಯ ರಾಜಿ ಮಾಡಿಕೊಂಡು ಹೋಗುವುದು ಉತ್ತಮ.

ಶ್ರೀ ಪಿ. ಎಂ. ದೇಸಾಯ್.—ಪಂಚಾಯತಿಯವರು ಬೇರೆ ಜಾಗವನ್ನು ಇವರಿಗಾಗಿ ಕೊಡ ಬೇಕೆಂದು ನಿಮಗೆ ಕೊಟ್ಟಿರುವ ರಿಪೋರ್ಟಿನಲ್ಲೇನಾದರೂ ತಿಳಿಸಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ.

Supply of water through pipes to the towns in North Kanara District.

*Q.—707. **Sri S. P. PHAYADE** (Ankola) —

Will the Government be pleased to state :—

(*a*) whether any towns in North Kanara District are supplied with drinking water through pipes, and if so, which are they ;

(*b*) whether there is any proposal to supply water through pipes for any of the towns in the near future in the said District and if so, what action is being taken by the Local Self-Government Institution and the Government in the matter ?

*A.—**Sri K. PUTTASWAMY** (Minister for Municipal Administration) —

(*a*) No.

(*b*) Yes. Proposals in respect of Bhatkal and Haliyal towns are under consideration.

ಶ್ರೀ ಎಸ್. ಪಿ. ಫಾಯಿದೆ.—ಉತ್ತರ ಕನ್ನಡ ಜಿಲ್ಲೆಯಲ್ಲ ಬಾವಿಗಳಿಲ್ಲದೇ ಕುಡಿಯುವ ನೀರಿಗಾಗಿ ತೊಂದರೆಪತ್ತಿದುರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗಾಗಲೇ ಈ ಪ್ರಶ್ನೆ ಸರ್ಕಾರದ ಮುಂದಿದೆ.

ಶ್ರೀ ಎಸ್. ಪಿ. ಫಾಯಿದೆ.—ಹಳಿಯಾಲ ತಾಲ್ಲೂಕಿಗಾಗಿ ಕುಡಿಯುವ ನೀರಿಗಾಗಿ ಬೇಗನೆ ವ್ಯವಸ್ಥೆ ಮಾಡಬೇಕೆನ್ನುವುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಕೆ. ಪಟ್ಟಸ್ವಾಮಿ.—ಹಳಿಯಾಲದಲ್ಲಿ ಕುಡಿಯುವ ನೀರಿಗಾಗಿ ತೊಂದರೆ ಇದೆ ಎನ್ನುವುದು ಗೊತ್ತು. ಇದಕ್ಕಾಗಿ ಒಂದು ಅಂದಾಜು ಮತ್ತು ಪ್ಲಾನುಗಳು ತಯಾರಾಗಿ ಅವುಗಳನ್ನು ಸರ್ಕಾರಕ್ಕೆ 29ನೇ ಮಾರ್ಚ್ 1963ರಲ್ಲಿ ಕಳುಹಿಸಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

Sri S. S. KOLKE BAIL.—Is it not a fact that the Bhatkal water supply scheme was sanctioned in the year 61-62 and if so what action was taken ?

Sri K. PUTTASWAMY.—It was sanctioned temporarily and it was sent back for a detailed plan and estimate and it was subsequently received and the estimated cost is Rs. 6,20,000. This is engaging the attention of Government.

Sri S. S. KOLKE BAIL.—Is the Government aware that in Bhatkal and other coastal areas, Filaria is prevalent and hence protected water supply is an urgent necessity ?

Sri K. PUTTASWAMY.—Yes.

Sri B. P. KADAM.—What is the cost of the proposal for Haliyal town ?

Sri K. PUTTASWAMY.—The revised estimate now received is for Rs. 4,92,000. This is also engaging the attention of Government.

ಶ್ರೀ ಟಿ. ಮಾದಯ್ಯಗೌಡ.—ಸರ್ಕಾರ ಕೊಟ್ಟಿರುವ ಉತ್ತರದಂತೆ ಸೌತ್ ಕೆನರಾ ಟೌನಿಗೆ ಪ್ರೊಟೆಕ್ಟೆಡ್ ವಾಟರು ಸಪ್ಲೈ ಪೂರ್ತಿಯಾಗಿ ಇಲ್ಲ ಎಂದು ತಿಳಿಯೋಣವೇ ?